**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>**

**ಸಿಸಿ ನಂ. 6532/2016 ಚಾಸಾಃ 6 ಪ್ರಾಸಾಃ 4**

| | | |
|---|---|---|
| ಸಾಕ್ಷಿದಾರರ ಹೆಸರು | : | ಹೇಮಚಂದ್ರ ಶೆಟ್ಟಿ |
| ತಂದೆಯ ಹೆಸರು | : | ವಾಸುಶೆಟ್ಟಿ |
| ವಯಸ್ಸು | : | 76 ವರ್ಷ |
| ವೃತ್ತಿ | : | ವೈದ್ಯಾಧಿಕಾರಿ |
| ವಾಸ | : | ಜೆ.ಪಿ.ನಗರ, ಬೆಂಗಳೂರು |

**<u>ಸಾಕ್ಷಿಯನ್ನು ದಿಃ 10.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸಾ.ಸ.ಅ ರವರಿಂದಃ-</u>**

ನಾನು 2012 ರಿಂದ 2019 ರವರೆಗೆ ಬೆಂಗಳೂರಿನ ಶುಶ್ರೂತ ಮೆಡಿಕಲ್ ಆಸ್ಪತ್ರೆಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕೆಲಸ ಮಾಡಿರುತ್ತೇನೆ. ಆರೋಪಿಯು 2010 ರಿಂದ 2014 ರವರಿಗೆ ನಮ್ಮ ಆಸ್ಪತ್ರೆಯಲ್ಲಿ ಸಿಸ್ಟಮ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ಆರೋಪಿಗೆ ಮೊದಲು 17 ಸಾವಿರ ಮಾಸಿಕ ವೇತನ ನೀಡುತ್ತಿದ್ದೆವು. ಆ ನಂತರ 24 ಸಾವಿರ ವೇತನ ನೀಡಲಾಗುತ್ತಿತ್ತು.

ಆರೋಪಿಯು ನಕಲಿ ಬಿಲ್ಲುಗಳು ಮತ್ತು ವೋಚರ್ ಗಳನ್ನು ಹಾಗೂ ದಾಖಲಾತಿಗಳನ್ನು ಸೃಷ್ಟಿಸಿ ಹಣವನ್ನು ಡ್ರಾ ಮಾಡಿಕೊಂಡು ಸುಮಾರು 18 ಲಕ್ಷದ 26 ಸಾವಿರ ರೂಗಳನ್ನು ದುರುಪಯೋಗ ಮಾಡಿಕೊಂಡು ನಮ್ಮ ಆಸ್ಪತ್ರೆಗೆ ವಂಚನೆ ಮಾಡಿರುತ್ತಾರೆ. ಆರೋಪಿಯು ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ಬಿಲ್ಲುಗಳನ್ನು ಮಾಡಿಕೊಂಡಿರುವುದನ್ನು ನಾನು ನೋಡಿರುತ್ತೇನೆ. ಆರೋಪಿಯು ಆಡಳಿತ ಮಂಡಳಿಯ ಸಿಸ್ಟಮ್ ಗಳಿಗೆ ಸಂಬಂಧಪಟ್ಟಂತೆ ನಕಲಿ ಕಂಪನಿಯೊಂದಿಗೆ ಅಕ್ರಮ ಒಪ್ಪಂದ ಮಾಡಿಕೊಂಡು ಹಣ ವರ್ಗಾವಣೆ ಮಾಡಿರುತ್ತಾರೆ. ಆರೋಪಿಯನ್ನು ನಕಲಿ ದಾಖಲಾತಿಗಳ ಬಗ್ಗೆ ವಿಚಾರಿಸಿದಾಗ ಅವರು ಸೂಕ್ತ ಉತ್ತರ ನೀಡಿರುವುದಿಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ವಿ.ಎನ್.ಆರ್. ವಕೀಲರಿಂದಃ</u>**

ಆರೋಪಿಯು ನೇಮಕವಾದ ದಿನಾಂಕ ನನಗೆ ನೆನಪಿರುವುದಿಲ್ಲ. ಆರೋಪಿಯು ಯಾವ ದಿನಾಂಕದಂದು ಕೆಲಸ ಬಿಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಜೊತೆ ಗುರುಮೂರ್ತಿ ಎಂಬುವವರು ಕೆಲಸ ಮಾಡುತ್ತಿದ್ದರು. ಸದರಿ ಗುರುಮೂರ್ತಿ ರವರು ಸಿಸ್ಟಮ್ ಮ್ಯಾನೇಜ್ ಮೆಂಟ್ ನಲ್ಲಿ ಆರೋಪಿಗಿಂತ ಸೀನಿಯರ್ ಆಗಿರುತ್ತಾರೆ. ನಾನು ಯಾವುದೇ ಬಿಲ್ಲು ಮತ್ತು ವೋಚರ್ ಗಳನ್ನು ಪರಿಶೀಲಿಸಿರುವುದಿಲ್ಲ. ಚಾಸಾ-1 ರವರು ಪರಿಶೀಲಿಸಿರುತ್ತಾರೆ. ಜೂನ್-2014 ರಿಂದ ಸೆಪ್ಟಂಬರ್-2014 ರವರೆಗೆ ಆರೋಪಿ ನಕಲಿ ದಾಖಲಾತಿಗಳನ್ನು ಸೃಷ್ಟಿಸಿರುತ್ತಾರೆ ಎಂದು ತಿಳಿಯಿತು.

ಆರೋಪಿಯು ಯಾವುದೇ ನಕಲಿ ದಾಖಲಾತಿಗಳನ್ನು ಸೃಷ್ಟಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಆಸ್ಪತ್ರೆಯ ಎಂ.ಡಿ. ಆಗಿರುವುದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**